ಯನ್ನು ಸರಿ ಪ್ರಮಾಣದಲ್ಲಿ ಪಡೆದುಕೊಳ್ಳುವಂತಾದರೆ ಕನಿಷ್ಟ ಪಕ್ಷ ೫೦೦ ಕೋಟಿ ರೂಪಾಯಿಗಳ ಆದಾಯ ಇವತ್ತಿನದಿವಸ ನಮ್ಮ ಗಣಿಗಳಿಂದ ನಮ್ಮ ರಾಜ್ಯದ ಬೊಕ್ಕಸಕ್ಕೆ ಬರುತ್ತದೆ. ಆದ್ದರಿಂದ ತಾವು ಈ ಬಗ್ಗೆ ವಿವರ ಕೊಡಬೇಕೆಂದು ಹೇಳುತ್ತೇನೆ.

ಶ್ರೀ ಬಿ. ಶಿವಣ್ಣ.—ಅಧ್ಯಕ್ಷರೇ, ನಾನು ಮೊದಲೇ ಹೇಳಿದೆ. ಮೈಸೂರು ಪ್ರಾಂತ್ಯದ ಕೆಲವು ಜನ ಪಟ್ಟೆದಾರರು ಹಾಗೂ ಇನ್ನಿತರ ಪಟ್ಟೆದಾರರು ಹೈಕೋರ್ಟಿಗೆ ರಿಟ್ ದೋಗಿ ರೂಲ್–ಸಿ ಏನಿದೆ, ಅದನು ಇಂಪ್ಲಿಮೆಂಟ್ ಮಾಡದಹಾಗೆ ತಡೆ ಆಜ್ಞೆ ತಂದಿದ್ದಾರೆ. ಇದರಿಂದಾಗಿ ಸರ್ಕಾರಕ್ಕೆ ಸ್ವಲ್ಪ ತೊಂದರೆಯಾಗಿದೆ. ನಾವು ಈ ಬಗ್ಗೆ ಹೊಸ ರೂಪದಲ್ಲಿ ಬಿಲ್ ತರುತ್ತಿದ್ದೇವೆ. ಈ ಬಗ್ಗೆ ಹೊಸ ಪಾಲಿಸಿ ಮಾಡಬೇಕೆಂದು ನಿರ್ಣಯ ಮಾಡಿದ್ದೇವೆ. ಅದರಲ್ಲಿ ತಮ್ಮ ಸಲಹೆಯನ್ನು ಸಹ ಅಳವಡಿಸಿಕೊಳ್ಳುತ್ತೇವೆ.

ಶ್ರೀ ಸಿ. ಎಸ್. ನಾಡಗೌಡ.—ತಾವು ಈ ಚೆಕ್‌ಪೋಸ್ಟ್‌ಗಳನ್ನು ಕ್ವಾರಿ ಹಂತದಲ್ಲಿ ಮಾಡುತ್ತೀರೋ ಅಥವಾ ಫಿನಿಷ್ಡ್ ಗೂಡ್ಸ್ ಹೋಗುವ ಹಂತದಲ್ಲಿ ಮಾಡುತ್ತೀರೋ ಎಂಬ ಪ್ರಶ್ನೆ ಕೇಳುತ್ತೇನೆ ?

ಶ್ರೀ ಬಿ ಶಿವಣ್ಣ.—ಮಾನ್ಯ ಸದಸ್ಯರು ಬಿಜಾಪುರದಲ್ಲಿನ ಇಲ್ಲೀಗಲ್ ಕ್ವಾರಿ ಬಗ್ಗೆ ಪ್ರಶ್ನೆ ಕೇಳಿದ್ದು ಆ ಬಗ್ಗೆ ಕ್ರಮ ತೆಗೆದುಕೊಂಡಿದ್ದೇವೆಂದು ಹೇಳಿದ್ದೇನೆ. ಆ ಪ್ರಕಾರವಾಗಿ ಕೇಸ್‌ಗಳನ್ನು ಸಹಾ ಹಾಕಿದ್ದೇವೆ, ಇನ್ನು ಟೆಕ್‌ಪೋಸ್ಟ್‌ಗಳ ಬಗ್ಗೆ ಏನು ಹೇಳಿದ್ದಾರೆ. ಆ ಬಗ್ಗೆ ಪರಿಶೀಲನೆ ಮಾಡಿ ನಾವು ಸೂಕ್ತ ಕಾರ್ಯಕ್ರಮ ಹಾಕಿಕೊಳ್ಳುತ್ತೇವೆ.

ಶ್ರೀ ವಾಟಾಳ್ ನಾಗರಾಜ್.—ಅಕ್ರಮವಾಗಿ ಕಲ್ಲು ಗಣಿಗಾರಿಕೆ ಮಾಡುವವರ ವಿರುದ್ಧ ವಿವಿಧ ನ್ಯಾಯಾಲಯಗಳಲ್ಲಿ ಮೊಕದ್ದಮೆಗಳನ್ನು ಹೂಡಲಾಗಿದೆ ಎಂದು ಹೇಳಿದ್ದೀರಿ ಇಂತಹವರನ್ನು ಏನಾದರೂ ಬಂಧಿಸಿದ್ದೀರಾ ಹೇಗೆ ಎಂಬುದನ್ನು ತಿಳಿಸಬೇಕು. ಇಂತಹವರ ಮೇಲೆ ತಾವು ಸೂಕ್ತ ಕಾರ್ಯಕ್ರಮ ತೆಗೆದುಕೊಂಡಿದ್ದೇವೆಂದಿದ್ದೀರಿ. ಹಾಗಿದ್ದರೆ ಇವರುಗಳು ಯಾರು ಎಂದು ಹೇಳಬೇಕು. ಇವರು ಯಾವ ಯಾವ ತಾಲ್ಲೂಕಿಗೆ ಸೇರಿದವರಂ ಎಂಬುದರ ಬಗ್ಗೆ ವಿವರ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ಶಿವಣ್ಣ.—ಇಲ್ಲಿ ಪ್ರಶ್ನೆ ಇರುವುದು ಬಿಜಾಪುರಕ್ಕೆ ಸಂಬಂಧಪಟ್ಟ ಹಾಗೆ ಮಾತ್ರ. ಮಾನ್ಯ ಸದಸ್ಯರು ಈ ಇಲಾಖೆಯ ಬೇಡಿಕೆ ಮೇಲಿನ ಚರ್ಚೆಯಲ್ಲಿ ಭಾಗವಹಿಸಿ ಮಾತನಾಡಿದರೆ ನಾನು ಎಲ್ಲ ವಿವರವನ್ನೂ ಒದಗಿಸಿಕೊಡುತ್ತೇನೆ.

ಶ್ರೀ ಸಿ. ಎಸ್. ನಾಡಗೌಡ.—ಮಾನ್ಯ ಅಧ್ಯಕ್ಷರೇ, ಈ ವಿಷಯದಲ್ಲಿ ಮಾನ್ಯ ವಾಟಾಳ್‌ನಾಗರಾಜ್ ಅವರು ಹೇಳಿದಹಾಗೆ ನಮ್ಮಲ್ಲಿಯೂ ಕೂಡಾ there are many white-collared men doing this business. ಸರ್ಕಾರ ಇದರ ಬಗ್ಗೆ ಕ್ರಮ ತೆಗೆದುಕೊಳ್ಳುವುದಕ್ಕೆ ಅಂಜಬಾರದು ಎಂಬ ಅಪೇಕ್ಷೆಯಿಂದ ಈ ಸಭೆಯಲ್ಲಿ ನಾನು ಪ್ರಶ್ನೆ ಕೇಳುತ್ತೇನೆ. ತಾವು ಈಗಿನ ಕಾನೂನಿಗೆ ತಿದ್ದುಪಡಿ ತಂದು ಅಂತಹವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಆರ್ಹರಾಗಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಬಿ. ಶಿವಣ್ಣ.—ಅಧ್ಯಕ್ಷರೇ, ಈ ಬಗ್ಗೆ ಏನಾದರೂ ದೂರುಗಳು ಅವರ ಹತ್ತಿರ ಇದ್ದರೆ ಕೊಡಲಿ. ನಾನು ಆ ಬಗ್ಗೆ ಎನ್‌ಕ್ವಯರಿ ಮಾಡಿಸುತ್ತೇನೆ.

ಶ್ರೀ ಜಿ. ರಾಜೂಗೌಡ —ಇವತ್ತು ಈ ಕಪ್ಪುಶಿಲೆ ಭೂಗರ್ಭ ಸಂಪತ್ತು ಆಗಿದೆ. ಭೂಮಿಯಲ್ಲಿ ಸಿಗುವ ಧನ, ಕನಕ ವಜ್ರ, ವೈಢೂರ್ಯವೆಲ್ಲಾ ಸರ್ಕಾರದ ಸಂಪತ್ತು ಎಂದು ಘೋಷಿಸಿರುವಂತೆ ಈ ಕಪ್ಪು ಶಿಲೆಯೂ ಸಹ ಸರ್ಕಾರದ ಸಂಪತ್ತು ಹಾಗೂ ಇದು ಸರ್ಕಾರಕ್ಕೆ ಸೇರಿದ್ದು ಎಂದು ತಿದ್ದುಪಡಿಯನ್ನು ತರುತ್ತೀರಾ ?

ಶ್ರೀ ಬಿ. ಶಿವಣ್ಣ.—ಅದನ್ನು ಪರಿಶೀಲನೆ ಮಾಡುತ್ತೇನೆ.

## ಬೀಡಿ ಕಾರ್ಮಿಕರ ಅಭಿವೃದ್ಧಿ ಯೋಜನೆ

೩೮೮. ಶ್ರೀ ಪಿ. ಜಿ. ಆರ್. ಸಿಂಧ್ಯ (ಕನಕಪುರ).—ಮಾನ್ಯ ಸಮಾಜ ಕಲ್ಯಾಣ, ಕಾರ್ಮಿಕ ರೇಷ್ಮೆ ವ್ಯವಸಾಯ, ಗಣಿ ಮತ್ತು ಭೂವಿಜ್ಞಾನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

೧. ರಾಜ್ಯದಲ್ಲಿ ಇರುವ ಬೀಡಿ ಕಾರ್ಮಿಕರ ಸಂಖ್ಯೆ ಎಷ್ಟು ?

೨. ಈ ಬೀಡಿ ಕಾರ್ಮಿಕರ ಅಭಿವೃದ್ಧಿಗಾಗಿ ಸರ್ಕಾರದವರು ಏನಾದರೂ ವಿಶೇಷ ಯೋಜನೆ ಕೈಗೊಳ್ಳಲು ನಿರ್ಧರಿಸಿದ್ದಾರೆಯೇ ?

೩. ಹಾಗಿದ್ದಲ್ಲಿ ಯಾವಾಗ ಈ ಯೋಜನೆಯನ್ನು ಜಾರಿಗೆ ತರಲಾಗುವುದು ?

ಶ್ರೀ ಬಿ. ಶಿವಣ್ಣ (ಸಮಾಜ ಕಲ್ಯಾಣ ಮತ್ತು ಕಾರ್ಮಿಕ ಸಚಿವರು).—

೧. ಸುಮಾರು ೩,೫೫,೨೪೪ ಜನ ಬೀಡಿ ಕೆಲಸಗಾರರಿರಾಜ್ಯದಲ್ಲಿದ್ದಾರೆ.

೨. ಇಲ್ಲ.

೩. ಉಪ ಪ್ರಶ್ನೆ (ಆ) ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

೯.೩೦ ಎ. ಎಂ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಮಾನ್ಯ ಅಧ್ಯಕ್ಷರೆ, ಬೀಡಿ ಕಾರ್ಮಿಕರಿಗೆ ವಿಶೇಷವಾದ ಯೋಜನೆಗಳನ್ನು ಸರ್ಕಾರದಿಂದ ತೆಗೆದುಕೊಂಡಿಲ್ಲವೆನ್ನುವ ಮಾತನ್ನು ಮಾನ್ಯ ಸಚಿವರು ಹೇಳಿದ್ದಾರೆ. ಈ ಬಗ್ಗೆ ನಿರ್ದಿಷ್ಟವಾಗಿ ಸಚಿವರ ಗಮನಕ್ಕೆ ಮೂರು ಅಂಶಗಳನ್ನು ತರುತ್ತೇನೆ ಈ ಬೀಡಿ ಎಲೆಗಳು ಬೀಡಿ ಕಾರ್ಮಿಕರಿಗೆ ಸಿಗುತ್ತಿಲ್ಲ. ಇತ್ತೀಚೆಗೆ ಬೀಡಿ ಎಲೆ ಬೆಲೆ ಬಹಳ ಕಡಿಮೆಯಾಗಿದೆ ಕೆಲವು ವ್ಯಾಪಾರಸ್ಥರು ಸೇರಿಕೊಂಡು ನಮ್ಮ ರಾಜ್ಯದಲ್ಲಿ ಅಗತ್ಯವಿರತಕ್ಕ ಬೀಡಿ ಎಲೆಗಳನ್ನು ಸರಿಯಾಗಿ ಸಿಗದೆ ಹಾಗೆ ಮಾಡುತ್ತಿದ್ದಾರೆಂದು ತಿಳಿದು ಬಂದಿದೆ. ಇದರ ಬಗ್ಗೆ ತಾವು ಏನು ಕ್ರಮ ತೆಗೆದುಕೊಂಡಿದ್ದೀರಿ? ಎರಡನೆಯದಾಗಿ ಬೀಡಿ ಕಾರ್ಮಿಕರಿಗೆ ವಿಶೇಷವಾಗಿ ಮನೆಗಳನ್ನು ಕಟ್ಟಲಿಕ್ಕೆ ಕೇಂದ್ರ ಸರ್ಕಾರದ ದೊಡ್ಡ ಯೋಜನೆ ಇದೆ. ಆವ್ವೊಂದು ಸದುಪಯೋಗವನ್ನು ಹಲವಾರು ವರ್ಷಗಳಿಂದ ಪಡೆಯಲಿಕ್ಕೆ ಸಾಧ್ಯವಾಗಿಲ್ಲ. ಮಾನ್ಯ ವೀರೇಂದ್ರಪಾಟೀಲ್‌ರವರು ಕೇಂದ್ರದಲ್ಲಿ ಕಾರ್ಮಿಕ ಸಚಿವರಾಗಿದ್ದಾಗ ಸ್ವಲ್ಪ ಹಣ ನಮಗೆ ಸಿಕ್ಕಿದೆ. ನಾವು ಈ ಬಗ್ಗೆ ಯೋಜನೆಯನ್ನು ತಯಾರು ಮಾಡಿ ಕೇಂದ್ರದಿಂದ ಸರಿಯಾಗಿ ಹಣವನ್ನು ತೆಗೆದುಕೊಂಡಿಲ್ಲ ೩ ಲಕ್ಷದ ೫೫ ಸಾವಿರದ ೨೪೪ ಜನ ಬೀಡಿ ಕಾರ್ಮಿಕರು ಇದ್ದಾರೆಂದು ಹೇಳಿದ್ದೀರಿ. ಆ ಸಂಖ್ಯೆ ಇನ್ನು ಬಹಳ ಹೆಚ್ಚು ಇದೆ. ಸರ್ಕಾರ ಕೊಟ್ಟಿರತಕ್ಕ ಮಾಹಿತಿ ಸರಿಯಿಲ್ಲ. ಬೀಡಿ ಕಾರ್ಮಿಕರಿಗೆ ಮನೆಗಳನ್ನು ಕಟ್ಟಲಿಕ್ಕೆ ಅವಕಾಶವಿದೆ. ಆದರ ಬಗ್ಗೆ ಕೇಂದ್ರ ಸರ್ಕಾರಕ್ಕೆ ಮನವಿಯನ್ನೂ ಸಲ್ಲಿಸಿದ್ದೀರಾ ಎಂಬುದನ್ನು ತಿಳಿಸಬೇಕು.

ಶ್ರೀ ಬಿ. ಶಿವಣ್ಣ.—ಮಾನ್ಯ ಅಧ್ಯಕ್ಷರೇ, ರಾಜ್ಯದಲ್ಲಿ ೩ ಲಕ್ಷದ ೫೫ ಸಾವಿರದ ೨೪೪ ಜನ ಬೀಡಿ ಕಾರ್ಮಿಕರು ಇದ್ದಾರೆ. ೧ ಲಕ್ಷದ ೪೦ ಸಾವಿರದ ೭೫೦ ಜನರಿಗೆ ಕಾರ್ಡ್ ಸಹ ಕೊಟ್ಟಿದ್ದೇವೆ. ಕೇಂದ್ರ ಸರ್ಕಾರ ಈ ಬಗ್ಗೆ ಒಂದು ಆಕ್ಟ್ ಪಾಸ್ ಮಾಡಿ ಬೀಡಿ ಕಾರ್ಮಿಕರಿಗೆ ಮೆಡಿಕಲ್ ಫೆಸಿಲಿಟೀಸ್, ಹೌಸಿಂಗ್ ಫೆಸಿಲಿಟೀಸ್ ಕೊಟ್ಟಿದೆ. ಆರ್ಥಿಕವಾಗಿ ಯಾರು ಹಿಂದುಳಿದಿದ್ದಾರೆ ಅವರಿಗೆ ಹೌಸಿಂಗ್ ಸ್ಕೀಮ್ ಇದೆ. ಆ ಪ್ರಕಾರ ನಾನಾ ತರಹ ಕಾರ್ಯಕ್ರಮಗಳನ್ನು ಕೇಂದ್ರ ಸರ್ಕಾರ ಹಾಕಿಕೊಂಡಿದೆ. ಅದನ್ನು ನಾವು ಇಂಪ್ಲಿಮೆಂಟ್ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ. ಬೀಡಿ ಎಲೆಗಳ ಕೊರತೆಯ ಬಗ್ಗೆ ಮಾನ್ಯ ಸಿಂಧ್ಯಾರವರು ಪ್ರಸ್ತಾಪ ಮಾಡಿದರು. ಬೀಡಿ ಎಲೆಗಳು ವಿಂಧ್ಯಪ್ರದೇಶದಿಂದ ನಮಗೆ ಬರುತ್ತದೆ. ಅಲ್ಲಿ ಟ್ಯಾಕ್ಸ್ ೮ ರೂಪಾಯಿ ಇದ್ದದ್ದನ್ನು ೪೦ ರೂಪಾಯಿಗಳಿಗೆ ಏರಿಸಿದ್ದಾರೆ, ಆದ್ದರಿಂದ ಬೀಡಿ ಎಲೆಗಳ ತೊಂದರೆಯಾಗಿದೆ. ಇಲ್ಲಿ ಸಹ ಬೀಡಿ ಮಾಲೀಕರು ಬೀಡಿ ಕಾರ್ಮಿಕರಿಗೆ ತೊಂದರೆ ಕೊಡುತ್ತಿದ್ದಾರೆಂದು ದೂರುಗಳು ಬಂದಿವೆ ಅವುಗಳನ್ನು ವಿಚಾರಮಾಡಿ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಪಿ. ಜಿ. ಆರ್ ಸಿಂಧ್ಯ.—ಮಾನ್ಯ ಮಂತ್ರಿಗಳು ಸರಿಯಾಗಿ ಹೋಂವರ್ಕ್ ಮಾಡಲಿಲ್ಲ ವೆಂದು ಕಾಣುತ್ತದೆ. ಏಕೆಂದರೆ, ಇದು ತೀವ್ರವಾಗಿರತಕ್ಕ ಸಮಸ್ಯೆ. ಕಾರ್ಮಿಕರಿಗೆ ಸಂಬಂಧಪಟ್ಟಿರತ ಕ ವಿಚಾರ ಇದನ್ನು ಪರಿಶೀಲನೆ ಮಾಡುತ್ತೇನೆಂದರೆ ಆಗುವುದಿಲ್ಲ. ಕಳೆದ ಎರಡು ತಿಂಗಳುಗಳಿಂದ ಬೀಡಿ ಕಾರ್ಮಿಕರು ಜೀವನ ಮಾಡುವುದು ಕಷ್ಟವಾಗಿದೆ. ಅವರು ಬೀಡಿ ಸುತ್ತಿ ದಿನಕ್ಕೆ ೧೨ ರೂಪಾಯಿ ೩ ರೂಪಾಯಿ ಸಂಪಾದನೆ ಮಾಡಿಕೊಳ್ಳುತ್ತಿದ್ದರು. ಆದರೆ ಈಗ ಅವರಿಗೆ ಬೀಡಿ ಎಲೆಗಳು ದೊರಕುತ್ತಿಲ್ಲ. ಅದರಲ್ಲೂ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬಹಳ ತೊಂದರೆಯಾಗಿದೆ. ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳು ಕ್ರಮ ತೆಗೆದುಕೊಳ್ಳುತ್ತಾರೆಯೆ ? ಜೊತೆಗೆ ಇವರಿಗಾಗಿ ಕೇಂದ್ರ ಸರ್ಕಾರದ ವಿಮಾ ಯೋಜನೆ. ಮನೆಗಳನ್ನು ಕಟ್ಟತಕ್ಕ ಯೋಜನೆಗಳಿವೆ. ಅವುಗಳು ಮೊದಲಿನಿಂದ ಇವೆ, ನಮ್ಮ ಸರ್ಕಾರವಿದ್ದಾಗಲೂ ಇತ್ತು. ನಿಮ್ಮ ಸರ್ಕಾರ ಬಂದಾಗಲೂ ಇವೆ. ಆದರೆ ನಾವು ಸರಿಯಾಗಿ ಯೋಜನೆಗಳನ್ನು ಮಾಡಿ ಕೇಂದ್ರ ಸರ್ಕಾರಕ್ಕೆ ಕಳುಹಿಸಿಲ್ಲ. ಬೀಡಿ ಕಾರ್ಮಿಕರಿಗೆ ಮನೆಗಳನ್ನು ಕಟ್ಟಲಿಕ್ಕೆ ಕೇಂದ್ರದಿಂದ ಹಣವನ್ನು ಪಡೆಯುವುದಕ್ಕೆ ಸಾಧ್ಯವಿದೆಯೇ ಎಂಬುದನ್ನು ಮಾನ್ಯ ಮಂತ್ರಿಗಳು ತಿಳಿಸಬೇಕು.

ಶ್ರೀ ಬಿ. ಶಿವಣ್ಣ.—ಮಾನ್ಯ ಸದಸ್ಯರು ಒಳ್ಳೆಯ ಸಲಹೆ ಕೊಟ್ಟಿದ್ದಾರೆ. ಈ ಬಗ್ಗೆ ನಾನು ಕ್ರಮ ತೆಗೆದುಕೊಳ್ಳುತ್ತೇನೆ. ಕೇಂದ್ರ ಸರ್ಕಾರದ ಜೊತೆಗೆ ಪತ್ರ ವ್ಯವಹಾರ ಮಾಡುತ್ತೇನೆ.

ಶ್ರೀ ಬಿ. ಎಂ. ಇದಿನಬ್ಬ.—ಮಾನ್ಯ ಅಧ್ಯಕ್ಷರೇ, ಬೀಡಿ ಕಾರ್ಮಿಕರು ಮೂರೂವರೆ ಲಕ್ಷ ಜನರು ಇದ್ದಾರೆಂದು ಮಾನ್ಯ ಸಚಿವರು ಹೇಳಿದ್ದಾರೆ. ಆದರೆ ನನ್ನ ಲೆಕ್ಕದಲ್ಲಿ ಐದೂವರೆ ಲಕ್ಷದಿಂದ ೬ ಲಕ್ಷ ಬೀಡಿ ಕಾರ್ಮಿಕರು ಇರಬಹುದು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮುಷ್ಕರಗಳು, ಜಾತಾಗಳು ನಡೆಯುತ್ತವೆ, ಇದರಿಂದಾಗಿ ವಾರಕ್ಕೆ ಎರಡು ದಿವಸ ಕೆಲಸ ಸಿಗುತ್ತಿಲ್ಲ. ಇದರಿಂದ ಅವರಿಗೆ ಊಟಕ್ಕೆ ಗತಿ ಇಲ್ಲ. ಎಲ್ಲಾ ಕಡೆ ಬೀಡಿ ಕಾರ್ಮಿಕರು ಬೀದಿಯಲ್ಲಿ ಬಂದಿದ್ದಾರೆ. ವಾರಕ್ಕೆ ಐದಾರು ದಿವಸ ಕೆಲಸ ಸಿಗತಕ್ಕ ಕಡೆ ಈಗ ಎರಡು ದಿವಸ ಸಹ ಸಿಗುತ್ತಿಲ್ಲ. ಆದ್ದರಿಂದ ಬೀಡಿ ಕಾರ್ಮಿಕರಿಗೆ ಕೆಲಸವನ್ನು ಕೊಡತಕ್ಕ ಕೆಲಸವನ್ನು ಮಾಡಬೇಕು. ಮತ್ತೆ ಮಧ್ಯಪ್ರದೇಶದಿಂದ ಎಲೆಗಳು ಬರಲಿಲ್ಲವೆಂದು ಹೇಳುತ್ತೀರಿ. ಎಲೆಗಳನ್ನು ತರಿಸಿ ದೇಣಿಗಳು ಕಾರ್ಮಿಕರಿಗೆ ಸರಿಯಾಗಿ ಕೆಲಸ ಕೊಡುವ ವ್ಯವಸ್ಥೆಯಾಗಬೇಕು. ಈ ಕಾರ್ಮಿಕರ ಸಮಸ್ಯೆ ಬಹಳ ಗಂಭೀರವಾದ ಸಮಸ್ಯೆ ಆಗಿದೆ. ಮಾನ್ಯ ಸಿಂಧ್ಯಾರವರು ಹೇಳಿದ ಹಾಗೆ ನಮ್ಮ ಜಿಲ್ಲೆಯಲ್ಲಿ ಎಲ್ಲಾ ಆಲ್ಲೋಲ ಕಲ್ಲೋಲ ಆಗುತ್ತಾ ಉಂಟು. ಈ ಬಗ್ಗೆ ಏನು ಏರ್ಪಾಡು ಮಾಡುತ್ತೀರಿ ? ಕಾರ್ಮಿಕರಿಗೆ ವಾರದಲ್ಲಿ ಸ್ಥಾಲ್ಕೃದು ದಿವಸ ಕೆಲಸ ಸಿಗುವ ವ್ಯವಸ್ಥೆಯನ್ನು ಮಾಡುತ್ತೀರಾ ಹೇಗೆ ?

ಶ್ರೀ ಬಿ. ಶಿವಣ್ಣ.—ಆದನ್ನು ಪರಿಶೀಲನೆ ಮಾಡುತ್ತೇನೆಂದು ನಾನು ಆಗಲೇ ಹೇಳಿದ್ದೇನೆ.

ಶ್ರೀ ಬಿ. ಎಂ. ಇದಿನಬ್ಬ.—ಮಾನ್ಯ ಮಂತ್ರಿಗಳು ಪರಿಶೀಲನೆ ಮಾಡುತ್ತೇನೆಂದರೆ ಏನು ? ಇದು ಬೀಡಿ ಕಾರ್ಮಿಕರ ಪ್ರಶ್ನೆ. ಆದ್ದರಿಂದ ಒಂದು ಸಮಾಧಾನಕರವಾದ ಉತ್ತರ ಕೊಡಿ.

ಶ್ರೀ ಬಿ. ಶಿವಣ್ಣ.—ನಾನು ಈ ಬಗ್ಗೆ ವಿಧಾನ ಪರಿಷತ್‌ನಲ್ಲಿ ಉತ್ತರ ಕೊಟ್ಟಿದ್ದೇನೆ. ಇದೇ ಪ್ರಶ್ನೆಗೆ ನಾನು ಆಗಲೇ ಉತ್ತರ ಕೊಟ್ಟಿರುವ ಕಾರಣ...

ಅಧ್ಯಕ್ಷರು.—ಮಾನ್ಯ ಸಚಿವರು ಆ ಸದನದ ಪ್ರಶ್ನೆಗೆ ಆ ಸದನದಲ್ಲಿ ಉತ್ತರ ಕೊಡಿ. ಈ ಸದನದಲ್ಲಿ ಕೇಳಿದ ಪ್ರಶ್ನೆಗೆ ಇಲ್ಲಿ ಉತ್ತರ ಕೊಡಬೇಕು. ಈಗ ಈ ಸದನದಲ್ಲಿ ಪ್ರಶ್ನೆ ಕೇಳುತ್ತಿದ್ದಾರೆ. ಅವರಿಗೆ ಇಲ್ಲಿ ಉತ್ತರ ಕೊಡಿ.

ಶ್ರೀ ಬಿ. ಶಿವಣ್ಣ.—ಅಧ್ಯಕ್ಷರೇ, ಇದು ಸರ್ಕಾರದ ಗಮನಕ್ಕೆ ಬಂದಿದೆ.....

ಶ್ರೀ ವಾಟಾಳ್ ನಾಗರಾಜ್.—ಇಂತಹ ಮಾದರಿ ಸಚಿವರು ಇದುವರೆಗೂ ಬಂದಿರಲಿಲ್ಲ.

MR. SPEAKER.—Let us be considerate to him. ತಾವು ಉತ್ತರ ಕೊಡಿ.

ಶ್ರೀ ಬಿ. ಶಿವಣ್ಣ.—ಈ ಬೀಡಿ ಕಾರ್ಮಿಕರ ಸಮಸ್ಯೆ ಸರ್ಕಾರದ ಗಮನಕ್ಕೆ ಬಂದಿದೆ. ಇದರ ಬಗ್ಗೆ ಕೂಡಲೇ ಕ್ರಮತೆಗೆದುಕೊಳ್ಳುತ್ತೇನೆ ಮತ್ತು ಕೇಂದ್ರಸರ್ಕಾರಕ್ಕೆ ಕೂಡ ಪತ್ರ ಬರೆದು ತಿಳಿಸುತ್ತೇವೆ. ರಾಜ್ಯಸರ್ಕಾರ ಏನು ಸಹಾಯ ಬೇಕೋ ಆದನ್ನು ಮಾಡುತ್ತದೆ ಎಂದು ನಾನು ತಮ್ಮ ಮೂಲಕ ತಿಳಿಸುತ್ತೇನೆ.

ಅಧ್ಯಕ್ಷರು.—ನೀವು ಡೆಲ್ಲಿಗೆ ಹೋಗಿದ್ದಾಗ ಏನಾದರೂ ಈ ವಿಚಾರ ಮಾತನಾಡಿದ್ದೀರಾ ಹೇಗೆ ?

ಶ್ರೀ ಬಿ. ಶಿವಣ್ಣ.—ಷೆಡ್ಯೂಲ್ಡ್ ಟ್ರೈಬ್ಸ್‌ಗೆ ಸಂಬಂಧಪಟ್ಟ ನ್ಯಾಷನಲ್ ಕಾನ್‌ಫೆರೆನ್ಸ್ ಇತ್ತು. ಈ ಕಾರ್ಮಿಕರ ಬಗ್ಗೆ ಕೂಡ ನಾನು ಮಾತನಾಡುತ್ತೇನೆ.

## ರಾಜ್ಯದ ಎಲ್ಲಾ ಜಿಲ್ಲೆಯ ಕೇಂದ್ರ ಸ್ಥಳಗಳಲ್ಲಿ ಕಾರ್ಮಿಕರ ಫಿರ್ಯಾದುಗಳು

೪೨೦. ಶ್ರೀ ಕರಿಯಣ್ಣ (ಹೊಳೆಹೊನ್ನೂರು).—ಮಾನ್ಯ ಸಮಾಜ ಕಲ್ಯಾಣ ಮತ್ತು ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದ ಎಲ್ಲಾ ಜಿಲ್ಲೆಯ ಕೇಂದ್ರ ಸ್ಥಳಗಳಲ್ಲಿ ಕಾರ್ಮಿಕ ಫಿರ್ಯಾದುಗಳ ವಿಚಾರಣೆಗೆ ಕಾರ್ಮಿಕ ನ್ಯಾಯಾಲಗಳು ಇವೆಯೇ ?

ಆ) ನ್ಯಾಯಾಲಯ ಇರುವ ಸ್ಥಳಗಳಲ್ಲಿ ಕಟ್ಟಡಗಳ ಸೌಕರ್ಯವು ಇದೆಯೇ ? ಮತ್ತು ಎಲ್ಲಾ ನ್ಯಾಯಾಲಯಗಳಲ್ಲಿ ನ್ಯಾಯಾಧೀಶರನ್ನು ನೇಮಕ ಮಾಡಲಾಗಿದೆಯೇ ? ಎಷ್ಟು ಸ್ಥಳಗಳಲ್ಲಿ ನ್ಯಾಯಾಧೀಶರ ಹುದ್ದೆ ಖಾಲಿ ಇದೆ ?